ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 182 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 05-12-2023. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು ಎಷ್ಟು ನೂಲಿನ ಗಿರಣಿಗಳಿವೆ: ಅವುಗಳ ಹೆಸರು ಮತ್ತು ಇರುವ ಸ್ಥಳದ ವಿವರಗಳೊಂದಿಗೆ ಮಾಹಿತಿ ನೀಡುವುದು; ಇವುಗಳಲ್ಲಿ ಎಷ್ಟು ಚಾಲನೆ ಯಲ್ಲಿವೆ ಎಷ್ಟು ಮುಚ್ಚಲಾಗಿದೆ: | ಕಲ್ಯಾಣ ಕರ್ನಾಟಕ ಭಾಗದಲ್ಲಿ ಒಟ್ಟು 06 ನೂಲಿನ ಗಿರಣಿಗಳಿವೆ. ಇವುಗಳಲ್ಲಿ 3 ನೂಲಿನ ಗಿರಣಿಗಳು ಚಾಲ್ತಿಯಲ್ಲಿವೆ, 2 ನೂಲಿನ ಗಿರಣಿಗಳು ಮುಚ್ಚಲ್ಪಟ್ಟಿವೆ ಹಾಗೂ 1 ಸಹಕಾರಿ ನೂಲಿನ ಗಿರಣಿಯು ಸಮಾಪನೆಯಾಗಿದೆ. ನೂಲಿನ ಗಿರಣಿಗಳ ಹೆಸರು ಮತ್ತು ಸ್ಥಳಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ) | ಇವುಗಳಲ್ಲಿ ಎಷ್ಟು ಲಾಭ ಮತ್ತು ಎಷ್ಟು ನಷ್ಟದಲ್ಲಿ ನಡೆಯುತ್ತಿವೆ: ಸರ್ಕಾರ ಈ ಮಿಲ್ಲುಗಳಿಗೆ ಇದುವರೆವಿಗೆ ಎಷ್ಟು ಸಹಾಯಧನ ನೀಡಿದೆ ಈ ಮಿಲ್ಲುಗಳ ಪುನಶ್ಚೇತನಕ್ಕೆ ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು: | ಒಟ್ಟು 06 ನೂಲಿನ ಗಿರಣಿಗಳ ಪೈಕಿ 3 ನೂಲಿನ ಗಿರಣಿಗಳು ಚಾಲನೆಯಲ್ಲಿದ್ದು, ಲಾಭದಲ್ಲಿರುತ್ತವೆ. 02 ನೂಲಿನ ಗಿರಣಿಗಳು ಮುಚ್ಚಲ್ಪಟ್ಟಿರುತ್ತವೆ. ಅವುಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.<br>ಪ್ರಸ್ತುತ ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ನೇಕಾರರ ಪ್ಯಾಕೇಜ್‌ನ SME ಯೋಜನೆಯ ಗಿರಿಜನ ಉಪಯೋಜನೆಯಡಿ 3 ನೂಲಿನ ಗಿರಣಿಗಳಿಗೆ ರೂ.1349.55 ಲಕ್ಷಗಳ ಬಂಡವಾಳ ಸಹಾಯಧನ ಹಾಗೂ ರೂ.154.84 ಲಕ್ಷಗಳ ಬಡ್ಡಿ ಸಹಾಯಧನವನ್ನು ನೀಡಲಾಗಿರುತ್ತದೆ. |
| ಇ) | ಪ್ರತಿಯೊಂದು ಮಿಲ್ಲುಗಳ ಅಂದಾಜು ಆಸ್ತಿಯ ಮೌಲ್ಯವೆಷ್ಟು ಮುಚ್ಚಿರುವ ಮಿಲ್ಲುಗಳನ್ನು ಪುನರಾರಂಭಿಸಲು ಹಾಗೂ ನಷ್ಟದಲ್ಲಿರುವ ಮಿಲ್ಲುಗಳನ್ನು ಲಾಭದಾಯಕವಾಗಿ ಮಾರ್ಪಡಿಸಲು ಸರ್ಕಾರದ ಮುಂದಿರುವ ಯೋಜನೆ ಗಳೇನು;: | ಚಾಲನೆಯಲ್ಲಿರುವ ನೂಲಿನ ಗಿರಣಿಗಳ ಅಂದಾಜು ಆಸ್ತಿಯ ಮೌಲ್ಯದ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಿದೆ.<br>ಇಲಾಖೆಯಲ್ಲಿ ನಷ್ಟದಲ್ಲಿರುವ ಮಿಲ್ಲುಗಳನ್ನು ಪುನರಾರಂಭಿಸಲು ಅಥವಾ ನಷ್ಟದಲ್ಲಿರುವ ಮಿಲ್ಲುಗಳನ್ನು ಲಾಭದಾಯಕವಾಗಿ ಮಾರ್ಪಡಿಸಲು ಯಾವುದೇ ಯೋಜನೆಗಳು ಇರುವುದಿಲ್ಲ. |
| ಈ) | ರಾಜ್ಯದ ರೈತರ ಹತ್ತಿಯ ಬೆಳೆಗೆ ಉತ್ತೇಜನ ನೀಡಲು ಸರ್ಕಾರದ ಮುಂದಿರುವ ಕಾರ್ಯ ಕ್ರಮಗಳೇನು? | ರಾಜ್ಯದಲ್ಲಿ ಹತ್ತಿ ಬೆಳೆಯಲ್ಲಿ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಿ ಉತ್ತೇಜನ ನೀಡಲು ಕೇಂದ್ರ ಪುರಸ್ಕೃತ ಆಹಾರ ಮತ್ತು ಪೌಷ್ಠಿಕ ಭದ್ರತೆ (FNS-Food & Nutrition Security) ಯೋಜನೆಯು ವಾಣಿಜ್ಯ ಬೆಳೆ-ಹತ್ತಿ ಕಾರ್ಯಕ್ರಮವನ್ನು ರಾಜ್ಯದ ಹತ್ತಿ ಬೆಳೆಯುವ ಪ್ರಮುಖ 7 ಜಿಲ್ಲೆಗಳಾದ ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರ್ಗಿ, ಹಾವೇರಿ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಈ FNS-ಹತ್ತಿ ಕಾರ್ಯಕ್ರಮದ ಅಡಿಯಲ್ಲಿ ಸಮಗ್ರ ಬೆಳೆ ನಿರ್ವಹಣಾ ಪದ್ಧತಿಗಳ ಮುಂಚೂಣಿ ಪ್ರಾತ್ಯಕ್ಷಿಕೆಗಳು, ಅತಿ ಉದ್ದ ಎಳೆಗಳ ತಳಿ ಮತ್ತು ಹತ್ತಿ ದೇಸಿ ತಳಿ ಪ್ರಾತ್ಯಕ್ಷಿಕೆ ಮತ್ತು ಅಂತರ ಬೆಳೆಗಳ ಮೇಲಿನ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು (ಒಟ್ಟು 1582 ಹೆಕ್ಟೇರ್ ವಿಸ್ತೀರ್ಣದಲ್ಲಿ ಪ್ರತಿ ಹೆಕ್ಟೇರ್ ರೂ.8000 ಗಳ ಸಹಾಯಧನದ), ಅನುಷ್ಠಾನ ಮಾಡಲಾಗುತ್ತಿದೆ ಹಾಗೂ ಸಸ್ಯ ಸಂರಕ್ಷಣಾ ಔಷಧಿಗಳು, ಜೈವಿಕ ನಿಯಂತ್ರಣ ಕಾರಕಗಳು ಮತ್ತು ಮೋಹಕ ಬಲೆಗಳ ವಿತರಣೆ ಮತ್ತು ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗುತ್ತಿದೆ. |

ಸಂಖ್ಯೆ: CI 133 JAKE 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ.ತಿಪ್ಪಣ್ಣಪ್ಪ (ವಿಧಾನಸಭೆಯಿಂದ ಚುನಾಯಿತರಾದವರು) ರವರು ಮಂಡಿಸಿರುವ ಇವರ ಚುಕ್ಕೆ ರಹಿತ ಪ್ರಶ್ನೆ ಸಂ.182 ಕ್ಕೆ ಉತ್ತರಗಳು**

**ಅನುಬಂಧ – 1**

ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ನೂಲಿನ ಗಿರಣಿಗಳ ಹೆಸರು, ವಿಳಾಸ ಮತ್ತು ಚಾಲನೆಯಲ್ಲಿರುವುದು / ಮುಚ್ಚಲಾದ ಗಿರಣಿಗಳ ವಿವರ ಪಟ್ಟಿ

| ಜಿಲ್ಲೆ | ನೂಲಿನ ಗಿರಣಿಯ ಹೆಸರು ಮತ್ತು ವಿಳಾಸ | ಚಾಲನೆಯಲ್ಲಿರುವ ನೂಲಿನ ಗಿರಣಿ | ಮುಚ್ಚಲಾಗಿರುವ ನೂಲಿನ ಗಿರಣಿ |
|---|---|---|---|
| ಬಳ್ಳಾರಿ | ರವೀಂದ್ರು ಬಾಬು ಸ್ಪಿನ್ನಿಂಗ್ & ಟೆಕ್ಸ್‌ಟೈಲ್ ಪ್ರೈ.ಲಿ., ಬೊಮ್ಮನಹಾಳ್ ರಸ್ತೆ, ಬಳ್ಳಾರಿ. | - | ಮುಚ್ಚಲಾಗಿದೆ |
| ಗುಲ್ಬರ್ಗ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | | |
| ಬೀದರ್ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | | |
| ಯಾದಗಿರಿ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | | |
| ರಾಯಚೂರು | ಭುವಾಲ್ ಸ್ಪಿನ್ನರ್ಸ್ ಪ್ರೈ.ಲಿ.,ರಾಯಚೂರು | - | ಮುಚ್ಚಲಾಗಿರುತ್ತದೆ |
| | ರಾಯಚೂರು ಸಹಕಾರಿ ನೂಲಿನ ಗಿರಣಿ ನಿ., ರಾಯಚೂರು | - | ಸಮಾಪನೆಯಾಗಿದೆ. |
| ಕೊಪ್ಪಳ | ಮೆ:ಶ್ರೀ.ಮನೋಜ ಟೆಕ್ಸ್ ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್ | ಚಾಲನೆಯಲ್ಲಿದೆ | - |
| | ಮೆ.ಶ್ರೀ.ಆದಿಶಕ್ತಿ ಟೆಕ್ಸ್ ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್ ,ನವಲಿ, ತಾ: ಕನಕಗಿರಿ,ಜಿಲ್ಲೆ ಕೊಪ್ಪಳ | ಚಾಲನೆಯಲ್ಲಿದೆ | - |
| | ಮೆ.ಶ್ರೀ.ಶ್ರೀನಿವಾಸ ಟೆಕ್ಸ್ ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್ ,ನವಲಿ, ತಾ: ಕನಕಗಿರಿ,ಜಿಲ್ಲೆ ಕೊಪ್ಪಳ | ಚಾಲನೆಯಲ್ಲಿದೆ | - |

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

## ಅನುಬಂಧ – 2

ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಮಿಲ್ಲುಗಳಿಗೆ ನೀಡಲಾದ ಸಹಾಯಧನದ ವಿವರ / ಪುನಶ್ಚೇತನಕ್ಕೆ ಕೈಗೊಂಡ ಕ್ರಮಗಳ ಪಟ್ಟಿ

| ಜಿಲ್ಲೆ | ಘಟಕದ ಹೆಸರು ಮತ್ತು ವಿಳಾಸ | ಸರ್ಕಾರದಿಂದ ನೀಡಲಾದ ಸಹಾಯಧನ | | ಲಾಭ | ನಷ್ಟ | ಷರಾ |
|---|---|---|---|---|---|---|
| | | ಬಂಡವಾಳ ಸಹಾಯಧನ | ಬಡ್ಡಿ ಸಹಾಯಧನ | | | |
| ಬಳ್ಳಾರಿ | ರವೀಂದ್ರ ಬಾಬು ಸ್ಪಿನ್ನಿಂಗ್ & ಟೆಕ್ಸ್‌ಟೈಲ್ ಪ್ರೈ.ಲಿ., ಬೊಮ್ಮನಹಾಳ್ ರಸ್ತೆ, ಬಳ್ಳಾರಿ. | - | - | - | - | ಮುಚ್ಚಲಾಗಿದೆ |
| ಗುಲ್ಬರ್ಗ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | | | | | |
| ಬೀದರ್ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | | | | | |
| ಯಾದಗಿರಿ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | | | | | |
| ರಾಯಚೂರು | ಭುವಾಲ್ ಸ್ಪಿನ್ನರ್ಸ್ ಪ್ರೈ. ಲಿ., ರಾಯಚೂರು | - | - | - | - | ಮುಚ್ಚಲಾಗಿದೆ |
| | ರಾಯಚೂರು ಸಹಕಾರಿ ನೂಲಿನ ಗಿರಣಿ ನಿ., ರಾಯಚೂರು | - | - | - | - | ಸಮಾಪನೆಯಾಗಿದೆ. |
| ಕೊಪ್ಪಳ | ಮೆ: ಶ್ರೀ. ಮನೋಜ ಟೆಕ್ಸ್‌ಟೈಲ್, ಸರ್ವೆ ನಂ.200/1, ಮತ್ತು 206/1, ಸಂಕನಾಳ ಮೈಲಾಪೂರ ರೋಡ್ | ರೂ.449.85 ಲಕ್ಷ | ರೂ.51.37 ಲಕ್ಷ | ಲಾಭದಲ್ಲಿದೆ | - | |
| | ಮೆ: ಶ್ರೀ. ಆದಿಶಕ್ತಿ ಟೆಕ್ಸ್‌ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್,ನವಲಿ, ತಾ: ಕನಕಗಿರಿ,ಜಿಲ್ಲೆ ಕೊಪ್ಪಳ | ರೂ.449.85 ಲಕ್ಷ | ರೂ.52.09 ಲಕ್ಷ | ಲಾಭದಲ್ಲಿದೆ | - | |
| | ಮೆ: ಶ್ರೀ. ಶ್ರೀನಿವಾಸ ಟೆಕ್ಸ್‌ಟೈಲ್, ಸರ್ವೆ ನಂ.200/1, ಮತ್ತು 206/1, ಸಂಕನಾಳ ಮೈಲಾಪೂರ ರೋಡ್, ನವಲಿ ತಾ: ಕನಕಗಿರಿ, ಜಿಲ್ಲೆ ಕೊಪ್ಪಳ | ರೂ.449.85 ಲಕ್ಷ | ರೂ.51.38 ಲಕ್ಷ | ಲಾಭದಲ್ಲಿದೆ | - | |

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

(12)

ಅನುಬಂಧ – 3

## ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಮಿಲ್ಲುಗಳ ಆಸ್ತಿಯ ಅಂದಾಜು ಮೌಲ್ಯದ ಪಟ್ಟಿ

| ಜಿಲ್ಲೆ | ಘಟಕದ ಹೆಸರು | ಅಂದಾಜು ಆಸ್ತಿಯ ಮೌಲ್ಯ |
|---|---|---|
| ಬಳ್ಳಾರಿ | ರವೀಂದ್ರ ಬಾಬು ಸ್ಪಿನ್ನಿಂಗ್ & ಟೆಕ್ಸ್‌ಟೈಲ್ ಪ್ರೈ.ಲಿ., ಬೊಮ್ಮನಹಾಳ್ ರಸ್ತೆ, ಬಳ್ಳಾರಿ. | ಮುಚ್ಚಲಾಗಿದೆ |
| ಗುಲ್ಬರ್ಗ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | - |
| ಬೀದರ್ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | - |
| ಯಾದಗಿರಿ | ಯಾವುದೇ ನೂಲಿನ ಗಿರಣಿಗಳಿರುವುದಿಲ್ಲ. | - |
| ರಾಯಚೂರು | ಭುವಾಲ್ ಸ್ಪಿನ್ನರ್ಸ್ ಪ್ರೈ.ಲಿ.,ರಾಯಚೂರು | ಮುಚ್ಚಲಾಗಿದೆ |
| | ರಾಯಚೂರು ಸಹಕಾರಿ ನೂಲಿನ ಗಿರಣಿ ನಿ., ರಾಯಚೂರು | ಸಮಾಪನೆಯಾಗಿದೆ. |
| ಕೊಪ್ಪಳ | ಮೆ:ಶ್ರೀ.ಮನೋಜ ಟೆಕ್ಸ್‌ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್ | ರೂ.7.00 ಕೋಟಿ |
| | ಮೆ.ಶ್ರೀ.ಆದಿಶಕ್ತಿ ಟೆಕ್ಸ್‌ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್,ನವಲಿ, ತಾ:ಕನಕಗಿರಿ,ಜಿಲ್ಲೆ ಕೊಪ್ಪಳ | ರೂ.7.00 ಕೋಟಿ |
| | ಮೆ.ಶ್ರೀ.ಶ್ರೀನಿವಾಸ ಟೆಕ್ಸ್‌ಟೈಲ್, ಸರ್ವೆ ನಂ.200/1, ಮತ್ತು 206/1,ಸಂಕನಾಳ ಮೈಲಾಪೂರ ರೋಡ್,ನವಲಿ, ತಾ:ಕನಕಗಿರಿ,ಜಿಲ್ಲೆ ಕೊಪ್ಪಳ | ರೂ.7.00 ಕೋಟಿ |

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ